# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 02/09/2022 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

## ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಿಗಳು

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು. ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

1. ಹಾಜರಿದ ಅಧಿಕಾರಿಗಳು:
   - ಜ್ಯೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
   - ಬಿ. ಡಬ್ಲ್ಯೂ.ಎಸ್.ಎಸ್.ಬಿ ಇನ್ಸ್‌ಪೆಕ್ಟರ್
   - ಸಿನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
   - ರೆವೆನ್ಯೂ ಅಧಿಕಾರಿಗಳು
   - ಎಸ್. ಡಬ್ಲ್ಯೂ.ಡಿ ಅಧಿಕಾರಿಗಳು
2. ಹಿಂದಿನ ಸಭೆಯ ನಡುವಳಿಯನ್ನು ಸಭೆಯಲ್ಲಿ ಚರ್ಚಿಸಿದಂತೆ ಸೂಕ್ತ ಕ್ರಮವಹಿಸಲು ಸಭೆಗೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರಿಗೆ ತಿಳಿಸಿದರು.
3. ವಿದ್ಯುತ್ ದೀಪ ನಿರ್ವಹಣೆ ಮತ್ತು ಪೋಲೀಸ್ ಇಲಾಖೆಗೆ ಸಂಬಂಧ ಪಟ್ಟ ಅಧಿಕಾರಿಗಳು ಹಾಜರಿರುವುದಿಲ್ಲ.
4. ಅರ್ಬನ್ ಪ್ರೈಮರಿ ಹೆಲ್ತ್ ಸೆಂಟರ್‌ನ್ನು 15ನೇ ಹಣಕಾಸು ಯೋಜನೆ ಅಡಿಯಲ್ಲಿ ಕೂಡಲೆ ಪ್ರಾರಂಭಿಸಬೇಕೆಂದು ಸಿನಿಯರ್ ಹೆಲ್ತ್ ಇನ್ಸ್‌ಪೆಕ್ಟರ್‌ರವರು ಸಭೆಗೆ ಕೋರಿದರು. ನೋಡಲ್ ಅಧಿಕಾರಿಗಳು ಮಾತನಾಡುತ್ತಾ ಸರಿಯಾದ ಸ್ಥಳವನ್ನು ಗುರುತಿಸಲು ತಿಳಿಸಿದರು. ಸಭೆಯು ವೆಸ್ಟ್ ಲಿಂಕ್ ರಸ್ತೆ ರೆವಿನ್ಯು ಕಚೇರಿ ಬಳಿ (ಕುಳ್ಳ ಪಾರ್ಕ್ ಹತ್ತಿರ) 2ನೇ ಅಡ್ಡ ರಸ್ತೆ, ಕಾರ್ನರ್ ಬಳಿ ಮಾಡಿದರೆ ಸೂಕ್ತ ಎಂದು ಸಾರ್ವಜನಿಕರು ತಿಳಿಸಿದರು, ನೋಡಲ್ ಅಧಿಕಾರಿಗಳು ಮಾತನಾಡುತ್ತ ಕೂಡಲೆ ಈ ಸಂಬಂಧ ವಲಯ ಆಯುಕ್ತರಿಗೆ ಕಡತವನ್ನು ಸಲ್ಲಿಸಿ ಎಂದು ಸಿನಿಯರ್ ಹೆಲ್ತ್ ಇನ್ಸ್‌ಪೆಕ್ಟರ್‌ರವರಿಗೆ ತಿಳಿಸಿದರು.
5. ಚುನಾವಣೆ ಗುರುತಿನ ಚೀಟಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಅರಿಯು ಮೂಡಿಸಲು ಕಾರ್ಯಕ್ರಮ ಕೈಗೊಳ್ಳಲು ಕ್ರಮ ವಹಿಸಬೇಕೆಂದು ಸಂಬಂಧ ಪಟ್ಟ ರೆವೆನ್ಯೂ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
6. ಸಿನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ರವರು ಮಾತನಾಡುತ್ತ ಕೋವಿಡ್ ನಿಯಂತ್ರಣ ನಮ್ಮ ವಾರ್ಡ್‌ನಲ್ಲಿ ಸುದಾರಿಸುತ್ತಿದೆ ಹಾಗೆಯೆ ಸೊಳ್ಳೆಯ ನಿಯಂತ್ರಣಕ್ಕೆ ಔಷಧಿಯನ್ನು ಸಿಂಪಡಣೆ ಮಾಡಿ ಸೊಳ್ಳೆ ನಿಯಂತ್ರಣ ಮಾಡಲು ಕ್ರಮವಹಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಹಾಗೆಯೆ ಸಾರ್ವಜನಿಕರಿಗೆ ಹಸಿಕಸ ಮತ್ತು ಒಣಕಸಗಳನ್ನು ಬೇರ್ಪಡಿಸುವ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.
7. ಹಾಗೆಯೆ ವಾರ್ಡ್‌ಗೆ ಸಂಬಂಧಿಸಿದ 'ಪ್ರೋಗ್ರಾಂ ಆಫ್ ವರ್ಕ್ಸ್'ಗಳ ಬಗ್ಗೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರಿಗೆ ತಿಳಿಸಲಾಯಿತು.
8. ಸಾರ್ವಜನಿಕ ಶೌಚಾಲಯ ಟೆಂಡರ್ ಫೈನಲೈಸ್ ಆಗದೆ ಸಮಸ್ಯ ಆಗಿದೆ ಸಂಬಂಧ ಪಟ್ಟವರಿಗೆ ಕೂಡಲೆ ಫೈನಲೈಸ್ ಮಾಡುವಂತೆ ನೋಡಲ್ ಅಧಿಕಾರಿ ತಿಳಿಸಿದರು.

9. ವಾರ್ಡ್ ಸಭೆಗೆ ಅಧಿಕಾರಿಗಳು ಮತ್ತು ಪೋಲಿಸ್ ಸಿಬ್ಬಂದಿಗಳು ಸರಿಯಾಗಿ ಹಾಜರಾಗುತ್ತಿಲ್ಲ ಆದ್ದರಿಂದ ಸಾರ್ವಜನಿಕರ ಕುಂದು-ಕೊರತೆಗಳು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ವಾರ್ಡ್ ಸದಸ್ಯರು ನೋಡಲ್ ಅಧಿಕಾರಿಗೆ ತಿಳಿಸಿದರು. ನೋಡಲ್ ಅಧಿಕಾರಿಗಳು ಮತಾನಾಡುತ್ತ ಮುಂದಿನ ಸಭೆಗಳಗೆ ಕಡ್ಡಾಯವಾಗಿ ಹಾಜರಿರುವಂತೆ ಮುಂಚಿತವಾಗಿಯೇ ಸಭೆಯ ಸೂಚನಾ ಪತ್ರವನ್ನು ಸಂಬಂಧಪಟ್ಟವರಿಗೆ ನೀಡಬೇಕೆಂದು ವಾರ್ಡ್ ಇಂಜಿನಿಯರ್‌ಗಳಗೆ ಸೂಚಿಸಿದರು.

10. ಈ ಹಿಂದಿನ ಸಭೆಯಲ್ಲಿ ನಾಗಪ್ಪ ರಸ್ತೆಯ ಪಾಟ್ ಹೋಲ್ಸ್ ಮುಚ್ಚಲು ತಿಳಸಲಾಗಿತ್ತು ಆದರು ಸಹ ಕ್ರಮವಹಿಸಲಾಗಿರುವುದಿಲ್ಲ. ಆದ್ದರಿಂದ ಕೂಡಲೆ ಕ್ರಮ ವಹಿಸಲು ಕಾರ್ಯದರ್ಶಿಗಳಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

**ನೋಡಲ್ ಅಧಿಕಾರಿಗಳು**
**ವಾರ್ಡ್ ಸಂ.77,**
**ದತ್ತಾತ್ರೇಯ ದೇವಸ್ಥಾನ ವಾರ್ಡ್**

**ಪ್ರತಿಯನ್ನು:-**

1. ವಿಶೇಷ ಆಯುಕ್ತರು (ಆಡಳತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.